# ಜನ ಸೇವಕ

ಅಭಿವೃದ್ಧಿಯ ಪರ್ವ

ಸಂಪುಟ 01, ಸಂಚಿಕೆ 10, ಅಕ್ಟೋಬರ್ 2022, ಯಲ್ಲಾಪುರ

## ಮುಂಡಗೋಡ ತಾಲೂಕಿನ ಹುನಗುಂದ ಹಾಗೂ ಕಾತೂರ ಗ್ರಾಮದಲ್ಲಿ

# ಸರಕಾರಿ ಪದವಿ ಪೂರ್ವ ಕಾಲೇಜು ಮಂಜೂರು



## ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಹೊಂದಿರುವ ಡಿಜಿಟಲ್ ಸಂಚಿಕೆ



ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರೊಂದಿಗೆ ಹಾವೇರಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.



ಮುಂಡಗೋಡ ತಾಲೂಕಿನಾದ್ಯಂತ 34 ಕೋಟಿ ರೂಪಾಯಿ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯ ಸಚಿವರಾದ ಸಿ.ಸಿ.ಪಾಟೀಲ್ ಅವರೊಂದಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.



ಉತ್ತರ ಕನ್ನಡ ಜಿಲ್ಲೆಗೆ ಸುಸಜ್ಜಿತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣದ ಕುರಿತಂತೆ ಆರೋಗ್ಯ ಸಚಿವರಾದ ಡಾ.ಕೆ.ಸುಧಾಕರ ಅವರೊಂದಿಗೆ ಸಭೆ ನಡೆಸಿದರು.



30 ವರ್ಷಗಳ ನಂತರ ಮೊಟ್ಟಮೊದಲ ಬಾರಿಗೆ ಮುಂಡಗೋಡ ಪಟ್ಟಣದ ಕೊಳಗೇರಿ ನಿವಾಸಿಗಳಿಗೆ ಅಧಿಕೃತ ಹಕ್ಕು ಪತ್ರವನ್ನು ವಿತರಿಸಿದರು.



ಮುಂಡಗೋಡ ಪಟ್ಟಣದ ಟೌನ್ ಹಾಲ್ ನಲ್ಲಿ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿದರು.




ಹಾವೇರಿ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.



“ ನನಗೂ ಆಸೆ, ಆಕಾಂಕ್ಷೆ ಹಾಗೂ ಜೀವನದ ಕಡೆಗೆ ಆಕರ್ಷಣೆಗಳಿವೆ. ಆದರೆ ಅವಶ್ಯಕತೆ ಬಿದ್ದರೆ ನಾನವುಗಳನ್ನು ತ್ಯಾಗ ಮಾಡಲು ಸಿದ್ಧನಾಗಿರುವೆ. ಇದೇ ನಿಜವಾದ ಬಲಿದಾನವಾಗಿದೆ. ”

- ಭಗತ್ ಸಿಂಗ್

ಸಂಪುಟ 01, ಸಂಚಿಕೆ 10, ಅಕ್ಟೋಬರ್ 2022, ಯಲ್ಲಾಪುರ

# ಪುಟ ಬಿಂಬ

» ದಶಕಗಳ ಬೇಡಿಕೆ ಈಡೇರಿಸಿದ ಶಿಕ್ಷಣ ಪ್ರೇಮಿ ಸಚಿವ ಶಿವರಾಮ್ ಹೆಬ್ಬಾರ್ 4

» ಮುಂಡಗೋಡು ನೆಲದಲ್ಲಿ ಬಿಜೆಪಿ ಕಾರ್ಯಕರ್ತರ ಸಮಾವೇಶದೊಂದಿಗೆ ಚುನಾವಣಾ ರಣಕಹಳೆ ಮೊಳಗಿಸಿದ ಹೆಬ್ಬಾರ್ 5

» »ನಮ್ಮೂರ ಸಾಧಕರು
- ಕುಸ್ತಿಯಲ್ಲಿ ಸಾಧನೆಗೈದ ಗ್ರಾಮೀಣ ಪ್ರತಿಭೆ 7

» ಡಾಕ್ಟರ್ ಪ್ಲಸ್
- ಸಿರಿ ಧಾನ್ಯಗಳು ಸ್ವಸ್ಥಬದುಕಿಗೆ ವರದಾನ 09

» ನಮ್ಮೂರ ಪ್ರವಾಸಿತಾಣ
- ಯಾಣ 11

» ಪತ್ರಿಕೆಯಲ್ಲಿ ಕಂಡಂತೆ 13



# ದಶಕಗಳ ಬೇಡಿಕೆ ಈಡೇರಿಸಿದ ಶಿಕ್ಷಣ ಪ್ರೇಮಿ

## ಸಚಿವ ಶಿವರಾಮ್ ಹೆಬ್ಬಾರ್

ಬಡತನ ನಿರ್ಮೂಲನೆ ಶಿಕ್ಷಣದಿಂದ ಮಾತ್ರ ಸಾದ್ಯ ಎಂಬ ಪ್ರತಿಪಾದನೆಯನ್ನು ಅತ್ಯಂತ ಆಳವಾಗಿ ನಂಬಿದವರು ಕಾರ್ಮಿಕ ಖಾತೆ ಸಚಿವರು ಹಾವೇರಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಮಾನ್ಯ ಶ್ರೀ ಹೆಬ್ಬಾರ್ ಅವರು.

ಮುಂಡಗೊಡು ತಾಲೂಕಿನಲ್ಲಿ ಬಹು ದಶಕಗಳಿಂದಲು ಪದವಿ ಪೂರ್ವ ಕಾಲೇಜಿನ ಬೇಡಿಕೆ ಇತ್ತು. ಇದುವರೆಗು ಈ ವಿಚಾರದಲ್ಲಿ ಸಂಪೂರ್ಣ ಪ್ರಯತ್ನ ಮಾಡಿದ ನಾಯಕರು ವಿರಳ. ಇಂತಹ ಸಂದರ್ಭದಲ್ಲಿ

ಹುನಗುಂದ ಮತ್ತು ಕಾತೂರಿನಲ್ಲಿ ಎರಡು ಪದವಿಪೂರ್ವ ಕಾಲೇಜು ಸ್ಥಾಪನೆಗೆ ಸರ್ಕಾರ ಆದೇಶ ನೀಡಿದ್ದು ಬರಲಿರುವ ಶೈಕ್ಷಣಿಕ ವರ್ಷದಿಂದಲೆ ಕಾಲೇಜು ಆರಂಭವಾಗಲಿದೆ.

ಬಡ, ಮದ್ಯಮ ಮತ್ತು ಅತ್ಯಂತ ಹಿಂದುಳಿದ ಕುಟುಂಬಗಳೇ ಹೆಚ್ಚಾಗಿ ವಾಸಿಸುವ ಹುನಗುಂದ ಹಾಗು ಕಾತೂರು ಗ್ರಾಮದ ವ್ಯಾಪ್ತಿಯಲ್ಲಿನ ವಿದ್ಯಾರ್ಥಿಗಳಿಗೆ ಅದರಲ್ಲೂ ದೂರದ ಊರುಗಳಲ್ಲಿನ ಕಾಲೇಜಿಗೆ ಹೋಗಲಾಗದೆ ಕಷ್ಟ ಅನುಭವಿಸುತ್ತಿರುವ ಹೆಣ್ಣು ಮಕ್ಕಳ ವಿಧ್ಯಾಬ್ಯಾಸದ ಕನಸಿನ ಬಾಗಿಲು ತೆರೆದು ನನಸಾಗುವಂತೆ ಮಾಡಿದ್ದಾರೆ, ಸಚಿವ ಶಿವರಾಮ್ ಹೆಬ್ಬಾರ್ ಅವರು.

ಬೆಂಬಿಡದ ಛಲಗಾರ, ಶಿಕ್ಷಣ ಪ್ರೇಮಿ,ಬಡವರ ಪಾಲಿನ ಭಾಗ್ಯಧಾತ, ದಶಕಗಳ ಕನಸು ಈಡೇರಿಸಿದ ಮಾನ್ಯ ಶ್ರೀ ಶಿವರಾಮ್ ಹೆಬ್ಬಾರ್ ಅವರ ವಿಧ್ಯಾಕ್ಷೇತ್ರದ ಬದ್ದತೆಯ ಕಾರ್ಯಕ್ಕೆ ನಮ್ಮದೊಂದು ನಮನವಿರಲಿ.

# ಮುಂಡಗೋಡು ನೆಲದಲ್ಲಿ ಬಿಜೆಪಿ ಕಾರ್ಯಕರ್ತರ ಸಮಾವೇಶದೊಂದಿಗೆ ಚುನಾವಣಾ ರಣಕಹಳೆ ಮೊಳಗಿಸಿದ

# ಹೆಬ್ಬಾರ್



**ಯಾರೂ ಯಾರನ್ನೂ ಮೋಸ ಮಾಡಲು ಸಾಧ್ಯವಿಲ್ಲ, ನಮ್ಮ ನಡೆ ನುಡಿ ಎಲ್ಲವನ್ನೂ ನಿರ್ಧರಿಸುತ್ತದೆ. ನೇರ, ದಿಟ್ಟ , ನಿರಂತರವಾಗಿದ್ದಾಗ ಯಾವುದಕ್ಕೂ ಭಯ ಪಡುವ ಅಗತ್ಯವಿಲ್ಲ. ಬಡವರನ್ನು ಕಾಪಾಡುವ ಸೇವೆ ನನ್ನಿಂದಾಗುತ್ತಿದೆ ಎಂಬ ಆತ್ಮವಿಶ್ವಾಸವಿದ್ದಾಗ ಮೇಲಿರುವ ಭಗವಂತನೂ ಕಾಪಾಡುತ್ತಾನೆ ಎಂದು ಹೆಬ್ಬಾರ್ ಅಭಿಪ್ರಾಯ ಪಟ್ಟರು**

ಬದಲಾದ ರಾಜಕೀಯ ಸನ್ನಿವೇಶದಲ್ಲಿ ರಾಜ್ಯದಲ್ಲಿ ಒಂದು ಸರ್ಕಾರದ ಉದಯಕ್ಕೂ ಇನ್ನೊಂದು ಸರ್ಕಾರದ ಪತನಕ್ಕೂ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡ 17 ಶಾಸಕರ ದಿಟ್ಟ ನಿರ್ಧಾರವೇ ಕಾರಣವಾಯಿತು. ಧೀಮಂತ ನಾಯಕ ಯಡಿಯೂರಪ್ಪನವರು ಕೊಟ್ಟ ಮಾತಿನಂತೆ ಸದಾ ನಮ್ಮ ಬೆನ್ನಿಗೆ ನಿಂತು ರಾಜ್ಯದಲ್ಲಿ ಜನರ ಆಶೋತ್ತರಗಳಿಗೆ ಸ್ಪಂದಿಸುವ ಕಾರ್ಯಕರ್ತರನ್ನೇ ಮಾಲಕರೆಂದುಕೊಳ್ಳುವ ಸಿದ್ಧಾಂತಬದ್ಧ ಬಿಜೆಪಿಯನ್ನು ಅಧಿಕಾರಕ್ಕೆ ತರಲಾಯಿತು. ಅದರಂತೆ ಸಚಿವನಾಗಿ ಕ್ಷೇತ್ರದ ಅಭಿವೃದ್ಧಿಗೆ ಕಿಂಚಿತ್ತೂ ಭಂಗ ಬರದಂತೆ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಅದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ಮಾದರಿಯಾಗುವಂತೆ ಜಾತಿ, ಮತ, ಪಂಥ ಬೇಧಗಳನ್ನು ಮರೆತು ಮುಂಡಗೋಡು ತಾಲೂಕಿನ ಜನತೆ ನನ್ನ ಕೈ ಹಿಡಿದು ನಡೆಸಿದ್ದಾರೆ. ಅವರೆಲ್ಲರ ಪ್ರೀತಿಗೆ ನಾನು ಚಿರಋಣಿ ಎಂದು ಕಾರ್ಮಿಕ ಖಾತೆ ಸಚಿವ ಶಿವರಾಮ ಹೆಬ್ಬಾರ್ ಹೇಳಿದರು.

ಅವರು ಪಟ್ಟಣದ ಟೌನ್‌ಹಾಲ್‌ನಲ್ಲಿ ಮುಂಡಗೋಡು ಬಿಜೆಪಿ ಮಂಡಲದ ವತಿಯಿಂದ ಹಮ್ಮಿಕೊಂಡ ಕಾರ್ಯಕರ್ತರ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.



ರಾಜ್ಯದಲ್ಲಿ ಚುನಾವಣಾ ವರ್ಷ ಇದಾಗಿದ್ದು ಹಳೆ ನೀರು ಹರಿದು ಹೋಗುತ್ತಿದೆ, ಹೊಸ ನೀರು ಹರಿದು ಬರುತ್ತಿದೆ. ಹೋಗುವ ನೀರಿಗೆ ತಡೆಗಟ್ಟುವ ಶಕ್ತಿ ನಮಗಿಲ್ಲ, ಆದರೆ ಬರುವ ಹೊಸ ನೀರನ್ನು ಕಟ್ಟಿ ಗಟ್ಟಿಗೊಳಿಸುವ ಶಕ್ತಿ ನಮಗಿದೆ ಎಂದು ವಿ.ಎಸ್. ಪಾಟೀಲ ಪಕ್ಷ ತೊರೆಯುವ ವಿಚಾರವನ್ನು ಮಾರ್ಮಿಕವಾಗಿ ನುಡಿದರು.

ಚುನಾವಣೆಯಾಗಿ ಕ್ಷೇತ್ರದ ಅಭಿವೃದ್ಧಿಯೊಂದನ್ನೇ ಗುರಿಯಾಗಿಸಿಕೊಂಡು ಹದಿನೇಳೇ ತಿಂಗಳಿಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರ್ಪಡೆಗೊಂಡು ಉಪಚುನಾವಣೆ ಎದುರಿಸಿ ನಿಮ್ಮೆಲ್ಲರ ಆಶೀರ್ವಾದದಿಂದ ಗೆದ್ದು ಸಚಿವನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಆದರೆ ಕ್ಷೇತ್ರದಾದ್ಯಂತ ತ್ಯಾಗ ಮಾಡಿದ್ದೇನೆ, ತ್ಯಾಗ ಮಾಡಿದ್ದೇನೆ ಎನ್ನುವ ವಿ.ಎಸ್.ಪಾಟೀಲ ರಾಜ್ಯದಲ್ಲಿ ಸರ್ಕಾರ ತರದೇ ಹೋಗಿದ್ದರೆ ಅವರಿಗೆ ಗೂಟದ ಕಾರಿನ ಭಾಗ್ಯವೇ ದೊರೆಯುತ್ತಿರಲಿಲ್ಲ. ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವೂ ಸಿಗುತ್ತಿರಲಿಲ್ಲ. ಒಂದು ಗ್ರಾ.ಪಂ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲಾಗದ ಈ ಕಾಲಘಟ್ಟದಲ್ಲಿ ಅಧಿಕಾರದಲ್ಲಿರುವ ಪಕ್ಷದ ಶಾಸಕನಾಗಿ ನಿಗಮ ಮಂಡಳಿಯ ಅಧ್ಯಕ್ಷನಾಗಿದ್ದರೂ ಅಧಿಕಾರ ತ್ಯಾಗ ಮಾಡಿ ಕ್ಷೇತ್ರದ ಏಳಿಗೆಗಾಗಿ ಪುನಃ ನಿಮ್ಮ ಮುಂದೆ ಉಪಚುನಾವಣೆಯ ಮೂಲಕ ಆಶೀರ್ವಾದ ಬೇಡಿ ಬಂದವನು ನಾನು ಎಂದು ತಾವು ಮಾಡಿದ ತ್ಯಾಗವನ್ನು ಮೆಲುಕು ಹಾಕಿದರು.





## ನಮ್ಮೂರ ಸಾಧಕರು

# ಕುಸ್ತಿಯಲ್ಲಿ ಸಾಧನೆ ಗೈದ ಗ್ರಾಮೀಣ ಪ್ರತಿಭೆ

ತಾಲೂಕಿನ ಪುಟ್ಟ ಗ್ರಾಮದ ಯುವಕನೊಬ್ಬ ತನ್ನ ಆರ್ಥಿಕ ಸಂಕಷ್ಟದ ನಡುವೆಯೂ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಬಂಗಾರದ ಪದಕ ಪಡೆದು ತಾಲೂಕಿನ ಕೀರ್ತಿ ಪತಾಕೆ ಹಾರಿಸಿದ್ದಾನೆ.

ಬಾಚಣಕಿ ಗ್ರಾ.ಪಂ ವ್ಯಾಪ್ತಿಯ ಅರಶಿಣಗೇರಿ ಗ್ರಾಮದ ಗುರುಸಿದ್ದಪ್ಪ ಚನ್ನಪ್ಪ ಹಡಪದ ಎಂಬ ಯುವಕ ಜೈಪುರ್‌ನಲ್ಲಿ ಪ್ರಸ್ತುತ ಸಾಲಿನ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಶಿಪ್‌ನ 66ಕೆ.ಜಿ ಸ್ಪರ್ಧೆಯಲ್ಲಿ ಬಂಗಾರದ ಪದಕ ಪಡೆದು ಅಂತರಾಷ್ಟ್ರಿಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಗುರುಸಿದ್ದಪ್ಪ ಬಾಲ್ಯದಿಂದಲೂ ಕುಸ್ತಿಯಲ್ಲಿ ಆಸಕ್ತಿ ಹೊಂದಿದ್ದರು. ಅವರು ತಮ್ಮ ಗ್ರಾಮದಲ್ಲಿ 4 ನೇ ತರಗತಿಯ ವರೆಗೆ ಓದಿ ನಂತರ ದಾವಣಗೇರಿಯಲ್ಲಿ ಎಸ್‌ಎಸ್‌ಎಲ್‌ಸಿ ವರೆಗೂ ವಿದ್ಯಾಭ್ಯಾಸ ಮುಗಿಸಿದ್ದಾರೆ. ಇವರ ಅಜ್ಜ, ತಂದೆ ಕುಸ್ತಿಪಟುವಾಗಿದ್ದರ. ಇವರ ತಂದೆ ಚನ್ನಪ್ಪ ಹಡಪದ ರಾಜ್ಯ ಪ್ರಶಸ್ತಿ ಹಾಗೂ ಹಲವಾರ ಪ್ರಶಸ್ತಿಗೆದ್ದು ಹೆಸರು ವಾಸಿಯಾಗಿದ್ದರು. ಈಗ ಇವರ ಮಗ ಗುರುಸಿದ್ದಪ್ಪ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ.




ನಮ್ಮ ತಂದೆಯಿಂದ ಕುಸ್ತಿ ಕಲಿತಿದ್ದೇನೆ. ದಾವಣಗೇರಿಯಲ್ಲಿ ವಿದ್ಯಾಭ್ಯಾಸ ಜೊತೆ ಕುಸ್ತಿಯ ತರಬೇತಿ ಮಾಡುತ್ತಿದ್ದೆ. ನಂತರ ಧಾರವಾಡದಲ್ಲಿ ತರಬೇತಿ ಪಡೆದಿದ್ದೇನೆ. ಆ ವೇಳೆ ನ್ಯಾಸರ್ಗಿ ಗ್ರಾಮದ ಜಗದೀಶ ಕುರಬರ ಎಂಬುವರು ಸಹಾಯ ಮಾಡಿದ್ದರು. ಸದ್ಯ ಧಾರವಾಡದಲ್ಲಿ ಏಳೆಂಟು ಯುವಕರಿಗೆ ಕುಸ್ತಿ ತರಬೇತಿ ನೀಡುತ್ತಿದ್ದೇನೆ. ನನಗೆ ಕೊನೆಯ ಅವಕಾಶ ಇದ್ದ ಕಾರಣ ಈ ಬಾರಿ ಸ್ಪರ್ಧೆಯಲ್ಲಿ ಭಾಗಿಯಾಗಿ ಬಂಗಾರ ಪದಕ ಗೆದ್ದು ಮುಂದಿನ ಅಂತರಾಷ್ಟ್ರೀಯ ಸ್ಪರ್ಧೆಗೆ ಆಯ್ಕೆಯಾಗಿದ್ದೇನೆ. ದುಬೈ

ಇಲ್ಲವೆ ಮಲೇಷಿಯಾದಲ್ಲಿ ಪಂದ್ಯಾವಳಿ ನಡೆಯುತ್ತದೆ. ನಮ್ಮ ತಂದೆ ಮಾಜಿ ಕುಸ್ತಿ ಪಟು ಅವರಿಗೆ ಸರಕಾರದಿಂದ ಗೌರವ ಧನ ಬರುತ್ತಿದೆ. ನಮಗೆ ಯಾವುದೇ ರೀತಿಯ ಸಹಾಯ ಬರಲ್ಲ. ಆರ್ಥಿಕ ಸಮಸ್ಯೆಯ ನಡುವೆ ಕುಸ್ತಿಯನ್ನು ಆಡುತ್ತಿದ್ದೇನೆ. ಸರಕಾರದಿಂದ ಸಹಾಯ ಮಾಡಿದರೆ ಇನ್ನು ಹೆಚ್ಚಿನ ನಮ್ಮಂತ ಗ್ರಾಮೀಣ ಪ್ರತಿಭೆಗಳು ಮುಂದೆ ಬರುತ್ತಾರೆ ಎಂದು ಕುಸ್ತಿಪಟು ಗುರುಸಿದ್ದಪ್ಪ ತಮ್ಮ ಅನಿಸಿಕೆ ಹೇಳಿದರು.

ಎಸ್.ಬಿ ಮಲ್ಲಡದ ಅರಶಿಣಗೇರಿ ಶಾಲೆಯ ಶಿಕ್ಷಕ: ಈತನು ಗ್ರಾಮೀಣ ಭಾಗದ ಪ್ರತಿಭೆ. ಈ ಹಿಂದೆ ತಾಲೂಕಿನಲ್ಲಿ ನಡೆಯುವ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಗೆಲ್ಲುತ್ತಿದ್ದನು. ಆರ್ಥಿಕ ಸಂಕಷ್ಟದ ನಡುವೆಯೂ ಕಷ್ಟಪಟ್ಟು ಶ್ರಮ ಹಾಕಿ ಸಾಧನೆ ಮಾಡುತ್ತಿದ್ದಾನೆ. ಕುಸ್ತಿಯಲ್ಲಿ ಅಂತರಾಷ್ಟ್ರೀಯ ಚಾಂಪಿಯನ್‌ಶಿಪ್‌ಗೆ ಆಯ್ಕೆ ಆಗಿರುವುದು ಹೆಮ್ಮೆಯ ವಿಷಯವಾಗಿದೆ.

ಚನ್ನಪ್ಪ ಹಡಪದ ಮಾಜಿ ಕುಸ್ತಿಪಟು: ಬಡತನದಲ್ಲಿಯೇ ಕುಸ್ತಿ ಕಲಿತಿದ್ದೇವೆ. ನಮ್ಮ ಕುಟುಂಬದಲ್ಲಿ ಕುಸ್ತಿ ರಕ್ತಗತದಲ್ಲಿ ಇದೆ. ನಾನು ಈ ಹಿಂದೆ ರಾಜ್ಯ ಪ್ರಶಸ್ತಿಯನ್ನು ಗೆದ್ದಿದ್ದೇನೆ. ಈಗ ನನ್ನ ಮಗ ರಾಷ್ಟ್ರೀಯ ಮಟ್ಟದಲ್ಲಿ ಬಂಗಾರದ ಪದಕ ಗೆದ್ದಿದ್ದಾನೆ.

ಇತ್ತೀಚ್ಚಿಗೆ ನನ್ನ ಮೊಮ್ಮಗಳು ಗದಗನಲ್ಲಿ 33ಕೆಜಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ. ಆದರೆ ಸರಕಾರದಿಂದ ನನಗೆ ಗೌರವ



ಹಣ ಬರುತ್ತದೆ ಹೊರೆತು. ಯಾವುದೇ ಸಹಾಯವಾಗಲಿ ಸೌಲಭ್ಯವಾಗಲಿ ಒದಗಿಸಿಲ್ಲ. ಆರ್ಥಿಕ ತೊಂದರೆಯಲ್ಲಿದ್ದೇವೆ. ಮಗನಿಗೆ ಗ್ರಾಮದ ಮತ್ತು ಪಕ್ಕದ ಹಿರಿಯರು ಸೇರಿ ಆರ್ಥಿಕ ಸಹಾಯ ಮಾಡಿ ಮಗನನ್ನು ಸ್ಪರ್ಧೆಗೆ ಕಳಿಸಿದ್ದರು. ಆದರೆ ಇವರ ಆಸೆ ನಿರಾಸೆ ಮಾಡದೆ ಬಂಗಾರದ ಪದಕ ಗೆದ್ದು ಗ್ರಾಮ ಕೀರ್ತಿ ತಂದಿದ್ದಾನೆ ಮಗನ ಸಾಧನೆ ಬಗ್ಗೆ ಗರ್ವವಿದೆ ಎಂದರು.

ಗುರುಸಿದ್ದಪ್ಪ ಅವರು ದಸರಾ ಮೇಯರ್ ಕಪ್, ರಾಜ್ಯ ಒಲಂಪಿಕ್ಸ್‌ನಲ್ಲಿ ಬಂಗಾರದ ಪದಕ, ಆಲ್ ಇಂಡಿಯಾ ಜಮಖಂಡಿ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಹಾಗೂ ಅಕ್ಟೋಬರ 3ರ ಸೋಮವಾರದ ಜೈಪುರ್‌ನಲ್ಲಿ ನಡೆದ ಸಿನಿಯರ್ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಬಂಗಾರದ ಪದಕ ಪಡೆದಿದ್ದಾರೆ. ಹೀಗೆ ಹಲವಾರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

# ಸಿರಿ ಧಾನ್ಯಗಳು ಸ್ವಸ್ಥಬದುಕಿಗೆ ವರದಾನ!



– ಡಾ ಸೌಮ್ಯ ಕೆ.ವಿ.
ತಜ್ಞ ವೈದ್ಯರು ತಾಲೂಕು ಆಸ್ಪತ್ರೆ
ಯಲ್ಲಾಪುರ.











ಫಾಸ್ಟ್ ಫುಡ್ ಹಾಗೂ ಸಂಸ್ಕರಿತ ಪ್ಯಾಕಡ್ ಆಹಾರವು ಜನಪ್ರಿಯವಾಗುತ್ತಿರುವ ಈ ಕಾಲದಲ್ಲಿ ನಮ್ಮ ಆಹಾರ ಸಂಸ್ಕೃತಿ ಎತ್ತ ಸಾಗುತ್ತಿದೆ ಎಂದು ಗಂಭೀರವಾಗಿ ಚಿಂತಿಸಬೇಕಿದೆ. ಬೊಜ್ಜು, ಮಧುಮೇಹ, ಹೃದಯಾಘಾತ ತಾರುಣ್ಯದಲ್ಲೇ ಕಾಡುತ್ತಿರುವದರಿಂದ ನಮ್ಮ ನೈಸರ್ಗಿಕ, ತಾಜಾ ಹಾಗೂ ಮನೆಯಲ್ಲೇ ಸಿದ್ಧಪಡಿಸಿದ ಆಹಾರದ ಬಗ್ಗೆ ಒಲವು ಮೂಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಿರಿಧಾನ್ಯಗಳು ಸ್ವಸ್ಥಬದುಕಿಗೆ ವರದಾನವಾಗಿವೆ.

ಸಿರಿಧಾನ್ಯಗಳು ನಮ್ಮದೇಶಕ್ಕೆ ಹೊಸತೇನಲ್ಲ. ಹರಪ್ಪಾ ಮೆಹೆಂಜೊದಾರೋ ನಾಗರಿಕತೆಗಳ ಕಾಲದಲ್ಲೇ ಸಿರಿಧಾನ್ಯಗಳ ಬಳಕೆ ವ್ಯಾಪಕವಾಗಿ ಇತ್ತೆಂಬುದಕ್ಕೆ ಆಧಾರವಿದೆ. ಜೋಳ, ನವಣೆ, ಸಜ್ಜೆ, ರಾಗಿ, ಊದಲು, ಹಾರಕ, ಬರಗು, ಕೊರಲೆ, ಸಾಮೆ ಇತ್ಯಾದಿಯಾಗಿ ಬಗೆಬಗೆಯ ಸಿರಿಧಾನ್ಯಗಳು ಲಭ್ಯವಿವೆ. ಇವನ್ನು ಬೆಳೆಯಲು ಹೆಚ್ಚು ನೀರು, ರಾಸಾಯನಿಕ ಗೊಬ್ಬರಗಳ ಅಗತ್ಯತೆಯೂ ಇಲ್ಲ.

ಜೀವನಶೈಲಿಯಿಂದ ಬರುವ ಅಸಾಂಸರ್ಗಿಕ ರೋಗಗಳಾದ ಅಧಿಕ ರಕ್ತದೊತ್ತಡ, ಮಧುಮೇಹ, ಬೊಜ್ಜು, ಹೃದಯ ಸಂಬಂಧೀ ಕಾಯಿಲೆಗಳ ನಿಯಂತ್ರಣದಲ್ಲಿ ಸಿರಿಧಾನ್ಯಗಳ ಪಾತ್ರದ ಬಗ್ಗೆ ಅನೇಕ ಧನಾತ್ಮಕ ವರದಿಗಳಿವೆ. ಸಿರಿಧಾನ್ಯಗಳಲ್ಲಿ ಗ್ಲೈಸೀಮಿಕ್ ಇಂಡೆಕ್ಸ್ ಕಡಿಮೆ ಇರುವುದರಿಂದ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಹಠಾತ್ತನೆ ಏರುವುದನ್ನು ತಪ್ಪಿಸುತ್ತದೆ. ಹೆಚ್ಚು ನಾರಿನಂಶವೂ ಇರುವುದರಿಂದ ಮಲಬದ್ಧತೆಯ ಸಮಸ್ಯೆಗೆ ರಾಮಬಾಣವಿದು. ಜೀರ್ಣಕ್ರಿಯೆ ಸಮರ್ಪಕವಾಗಿ ನಡೆಯಲು ಕೂಡ ಸಹಕಾರಿ. ರಂಜಕ ಮೊದಲಾದ ಖನಿಜಗಳು ದೇಹಕ್ಕೆ ಪೂರೈಸಲ್ಪಡುತ್ತವೆ.

ದಿನದ ಮೂರೂ ಹೊತ್ತೂ ಅಕ್ಕಿಯನ್ನು ಮುಖ್ಯ ಆಹಾರವಾಗಿ ಬಳಸುವ ಬದಲು ಒಂದು ಹೊತ್ತಾದರೂ ಸಿರಿಧಾನ್ಯಗಳನ್ನು ಸೇವನೆ ಮಾಡುವುದು ಉತ್ತಮವೆಂದು ಪಥ್ಯಾಹಾರ ತಜ್ಞರು ಅಭಿಪ್ರಾಯ ಪಡುತ್ತಾರೆ. ಸಿರಿಧಾನ್ಯಗಳ ಸೇವನೆ ಹೇಗೆ ಮಾಡುವುದು? ಸಾಮಾನ್ಯವಾಗಿ ಸಿರಿಧಾನ್ಯಗಳು ತಿನ್ನಲು ರುಚಿಕಟ್ಟಾಗುವದಿಲ್ಲವೆಂಬುದು ಬಹಳಷ್ಟು ಜನರ ಅಭಿಪ್ರಾಯವಾಗಿದೆ. ಉದರಕ್ಕೂ ಹಿತವಾಗುವಂತೆ ಅಧರಕ್ಕೂ ರುಚಿಯಾಗುವಂತೆ ಸಿರಿಧಾನ್ಯಗಳನ್ನು ಆಹಾರಪದ್ಧತಿಯಲ್ಲಿ ಹೇಗೆ ಅಳವಡಿಸಿಕೊಳ್ಳುವುದು ಎಂದು ನೋಡೋಣ:

- ದೋಸೆಗೆ ಅಕ್ಕಿ ನೆನೆಹಾಕುವಾಗ ಅಕ್ಕಿಯ ಪ್ರಮಾಣ ಕಡಿಮೆ ಮಾಡಿ ಅಷ್ಟೇ ಪ್ರಮಾಣದ ಸಿರಿಧಾನ್ಯವನ್ನು ನೆನೆ ಹಾಕುವುದು.
- ಖಿಚಡಿ, ಬಿಸಿಬೇಳೆಬಾತು ಮಾಡುವಾಗ ಅಕ್ಕಿಯ ಬದಲು ಸಿರಿಧಾನ್ಯಗಳನ್ನು ಹಾಕುವುದು.
- ನವಣೆ ಅಥವಾ ಬರಗನ್ನು ಬೇಯಿಸಿ ತರಕಾರಿ ಹಾಗೂ ಒಗ್ಗರಣೆ ಸೇರಿಸಿ ಉಪ್ಪಿಟ್ಟು ಮಾಡುವುದು.
- ಬೆಲ್ಲ ಹಾಕಿ ಸಿರಿಧಾನ್ಯದ ಪಾಯಸ ಮಾಡುವುದು.
- ಅನ್ನದ ಬದಲು ನವಣೆ, ಸಾಮೆ, ಊದಲು, ಬರಗು ಈ ಯಾವುದೇ ಸಿರಿಧಾನ್ಯವನ್ನು ಬೇಯಿಸಿ ಸಾಂಬಾರು, ಪಲ್ಲೆ, ತಂಬಳಿ, ಭಾಜಿ ಹೀಗೆ ಮನೆಯಲ್ಲಿ ಮಾಡುವ ಯಾವುದೇ ಪದಾರ್ಥದೊಂದಿಗೆ ಸೇವಿಸುವುದು.
- ರಾಗಿ ರೊಟ್ಟಿ, ರಾಗಿಮುದ್ದೆ, ಜೋಳದ ರೊಟ್ಟಿ, ಸಜ್ಜೆ ರೊಟ್ಟಿ ಇವು ಕೂಡಾ ಸಿರಿಧಾನ್ಯಗಳಿಂದ ತಯಾರಾದವೇ.
- ಸಿರಿಧಾನ್ಯಗಳಿಂದ ಲಾಡು ಮೊದಲಾದ ಸಿಹಿತಿನಿಸುಗಳನ್ನು ತಯಾರಿಸಬಹುದು.
- ಸೂಪ್, ಬರ್ಗರ್, ಕುಕೀಸ ನಲ್ಲಿ ಸಿರಿಧಾನ್ಯಗಳನ್ನು ಬಳಸಬಹುದು.
- ಭೇಲ್ ಪುರಿ, ಕಟ್ಲೆಟ್, ಚಕ್ಕುಲಿ ತಯಾರಿಕೆಯಲ್ಲಿಯೂ ಸಿರಿಧಾನ್ಯಗಳನ್ನು ಯಶಸ್ವಿಯಾಗಿ ಉಪಯೋಗಿಸಲಾಗಿದೆ.

ಮನಸ್ಸಿದ್ದರೆ ಮಾರ್ಗವಿದ್ದೇ ಇದೆ ಎಂಬ ಮಾತಿದೆ. ಹೀಗಾಗಿ ಮನಸ್ಸು ಮಾಡಿದರೆ ರುಚಿಕಟ್ಟಾದ ಸಿರಿಧಾನ್ಯಗಳ ಆಹಾರ ತಿನಿಸಿನ ತಯಾರಿಕೆ ಅಸಾಧ್ಯವೇನಲ್ಲ. ಬಳಸುತ್ತ ಹೋದಂತೆ ಮೈಗೆ ಒಗ್ಗುತ್ತ ಹೋಗುತ್ತದೆ. ಥೈರಾಯಿಡ್ ಸಮಸ್ಯೆ ಇರುವವರಲ್ಲಿ ತುಸು ಎಚ್ಚರಿಕೆ ಬೇಕು. ಒಂದೇ ಸಿರಿಧಾನ್ಯದ ಬದಲು ಬೇರೆ ಬೇರೆ ಸಿರಿಧಾನ್ಯಗಳನ್ನು ಬಳಸುವುದು ಆರೋಗ್ಯಕ್ಕೆ ಉತ್ತಮ.

# ನಮ್ಮೂರ ಪ್ರವಾಸಿತಾಣ

## ಯಾಣ









**ಯಾಣ** ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲೊಂದು. ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಶ್ರೇಣಿಯಲ್ಲಿದೆ. ಇದು ಶಿರಸಿ ಇಂದ 45 ಕಿ.ಮಿ. ದೂರದಲ್ಲಿದೆ." ರೊಕ್ಕಿದ್ದರೇ ಗೋಕರ್ಣ ಸೊಕ್ಕಿದ್ದರೆ ಯಾಣ" ಎಂಬ ಮಾತು ಚಾಲ್ತಿಯಲ್ಲಿದೆ. ಏಕೆಂದರೆ ಯಾಣಕ್ಕೆ ಯಾತ್ರೆ ಕೈಕೊಳ್ಳುವದು ಹಿಂದೆ ಅಷ್ಟೊಂದು ಸಾಹಸದ ಮಾತೇ ಆಗಿತ್ತು. ಇಂದು ಯಾಣದ ಹತ್ತಿರದವರೆಗೂ ರಸ್ತೆಯಾಗಿದೆ. ಕೇವಲ ಕಿಲೋಮೀಟರ ದೂರವನ್ನಷ್ಟೇ ನಡೆಯಬೇಕಾಗುವದು. ಕುಮಟಯಿಂದ ಹರಿಟೆಯ ಬಳಿಯ ಮಾರ್ಗದಿಂದ ಅಂಕೋಲ ಬದಿಯಿಂದ ಅಚವೆ ಮಾರ್ಗವಾಗಿ ಶಿರಸಿಯಿಂದ ಹೆಗಡೆಕಟ್ಟಾ ಮಾರ್ಗವಾಗಿ ಕಾಡಿನಲ್ಲಿ ಹಾದು ಯಾಣವನ್ನು ತಲುಪಬೇಕು, ವಡ್ಡಿ, ಮತ್ತಿ, ದೇವಿಮನೆ ಘಟ್ಟಗಳು ಸುತ್ತುವರಿಯಲ್ಪಟ್ಟದ್ದರಿಂದ ಯಾವ ದಾರಿಯಲ್ಲಿ ಬಂದರೂ ದುರ್ಗಮ ಬೆಟ್ಟದ ದಾರಿ ತಪ್ಪಿದ್ದಲ್ಲ.

ಯಾಣದ ಶಿಖರ (ದೇವಾಲಯ) ಎಂದು ಕರೆಯಲ್ಪಡುವ ಹಿರಿಬಂಡೆ 120 ಮೀಟರ ಎತ್ತರವಾದ ಸುಮಾರು ಅಷ್ಟೇ ಅಗಲವಾದ ನೆಲಮುಗಿಲನ್ನು ಜೋಡಿಸುವ ಕರ ಪರದೆಯಂತೆ ಬೃಹದಾಕಾರದ ಭಯಂಕರವಾದ ಶಿಲಾ ರೂಪವಾಗಿದೆ. ಇದನ್ನು ಮೊದಲೊಮ್ಮೆ ಕಂಡಾಗ ಎಂಥವನಾದರು ನಿಬ್ಬೆರಗಾಗಿ ಪ್ರಕೃತಿ ಮಹಾಕೃತಿಗೆ ತಲೆ ಮಣಿಯಲೇ ಬೇಕು. ಈ ಬಂಡೆಯ ಮಧ್ಯದಲ್ಲಿ ಸೀಳು ಇದ್ದು ನೆತ್ತಿಯ ಮೇಲೆ ಜಲ ಸಂಚಯವಿದೆ. ಈ ಭೀಮ ಬಂಡೆಯ ಸೀಳಿನ ಗುಹೆಯಲ್ಲಿ ತಾನಾಗಿ ಮೂಡಿನಿಂತ ಭೈರವೇಶ್ವರಲಿಂಗ ಎರಡು ಮೀಟರ ಎತ್ತರವಾಗಿದ್ದು ಈ ಲಿಂಗದ ಮೇಲೆ ಸದಾ ಅಂಗುಲ ಗಾತ್ರದ ನೀರು ಮೇಲಿನಿಂದ ಒಸರುತ್ತಿರುತ್ತದೆ.



ಸ್ಕಂದಪುರಾಣದಲ್ಲಿ ಯಾಣದ ಕತೆ ನಿರೂಪಿತವಾಗಿದೆ. ಭಸ್ಮಾಸುರನು ಈಶ್ವರನಿಂದ ಉರಿಹಸ್ತದ ವರ ಪಡೆದು ಕೊನೆಗೆ ಈಶ್ವರನನ್ನೇ ಸುಡುವದಾಗಿ ಅಟ್ಟಿಸಿಕೊಂಡು ನಡೆದಾಗ ಭೈರವೇಶ್ವರನ ರಕ್ಷಣೆಗಾಗಿ ಮಹಾವಿಷ್ಣುವು ಮೋಹಿನಿಯಾಗಿ ಬಂದು ಭಸ್ಮಾಸುರನನ್ನು ಒಲಿಸಿ ಕುಣಿಸಿ ಅವನ ಹಸ್ತವನ್ನೆ ಅವನ ತಲೆಮೇಲಿರಿಸುವಂತೆ ಮಾಡಿ ಭಸ್ಮಾಸುರನನ್ನು ಭಸ್ಮ ಮಾಡಿದ ಸ್ಥಳವಿದೆಂದು ಪ್ರತೀತಿ. ಸುತ್ತಲಿನ ಅರಣ್ಯ ಪ್ರದೇಶವೆಲ್ಲ ಕಪ್ಪಾದ ಭಸ್ಮಮಯ ಮಣ್ಣಿನಿಂದ ತುಂಬಿರುವದರಿಂದ ಈ ಹೇಳಿಕೆಗೊಂದು ಪುಷ್ಠಿಯೊದಗಿದೆ. ಯಾಣದ ಬಂಡೆಯ ಮೇಲೆಲ್ಲ ಸಾವಿರಾರು ಹಿರಿಜೇನು ಹುಟ್ಟುಗಳು ಕಂಗೊಳಿಸುತ್ತವೆ. ಈ ಹೆಬ್ಬಂಡೆಯಿಂದ ಇಳಿದು ಬಂದ ಪ್ರವಾಹವೆ ಮುಂದೆ ಚಂಡಿಕಾ ನದಿಯಾಗಿ ಅಘನಾಶಿನಿ ನದಿಯನ್ನು ಸೇರುತ್ತದೆ.

ಈ ಬಂಡೆಯಿದ್ದ ಬೆಟ್ಟದ ಕೆಳಗಡೆ ನದಿಯಲ್ಲಿ ಸ್ನಾನಮಾಡಿ ಮೇಲೇರಿ ಹೋಗುವಾಗ ಇನ್ನೊಂದು ಕಿರಿಗಾತ್ರದ "ಹೊಲತಿ ಶಿಖರ" (ಮೋಹಿನಿ ಶಿಖರ) ಕಂಗೊಳಿಸುತ್ತದೆ. ಇಂಥ ಹಲವಾರು ಮಹಾಮಹಾ ಬಂಡೆಗಳು ಯಾಣದ ಪರಿಸರದಲ್ಲಿವೆ. ಪ್ರಕೃತಿಯ ಭವ್ಯತೆಯ ದಿವ್ಯದರ್ಶನದಿಂದ ಪುನೀತನಾದ ಪ್ರವಾಸಿಗೆ ಪ್ರವಾಸದ ಪ್ರಯಾಸದ ಅರಿವಾಗುವದಿಲ್ಲ. ಪೂರ್ವಕಾಲದಲ್ಲಿ ಯಾಣದ ಪ್ರದೇಶ ಸಮೃದ್ಧ ಪ್ರದೇಶವಾಗಿದ್ದು "ಯಾಣದ ಎಪ್ಪತ್ತು ಹಳ್ಳಿ" ತುಂಬಾ ಪ್ರಖ್ಯಾತವಾಗಿತ್ತು. ಶಿವರಾತ್ರಿಯ ದಿನ ಇಲ್ಲಿ ಪೂಜೆ ಸಲ್ಲಿಸಿ ದಂಡಿತೀರ್ಥದ ನೀರನ್ನು ತಂದು ಗೋಕರ್ಣದ ಮಹಾಬಲೇಶ್ವರನಿಗೆ ಅರ್ಪಿಸಿದರೆ ಮಹಾಪುಣ್ಯವಂತೆ, ಕೌಶಿಕ ರಾಮಾಯಣ ಬರೆದ ಬತ್ತಲೇಶ್ವರ ಕವಿ ಇಲ್ಲಿ ವಾಸಿಸಿದ್ದನಂತೆ. ಪ್ರವಾಸದ ಕಾಲದಲ್ಲಿ ಎತ್ತರ ಗಿಡಗಳ ದಟ್ಟ ವಿಸ್ತಾರ ಕಾಡು ತನುಮನದ ಆಯಾಸವನ್ನೆಲ್ಲ ಮರೆಸುತ್ತದೆ.

ನವಕಿರಣಗಳ ಶುಭಪರ್ವ, ಸುಖ,
ಶಾಂತಿ ಸಂತೋಷ, ಸಮೃದ್ಧಿಯ ಸವಿಗಾನ
ಶುಭವ ಸ್ಪರ್ಶಿಸಲಿ ಹೃದಯ ನಗುವು
ಮಿನುಗಲಿ ಅನುದಿನ ಇದು ನಮ್ಮ ಆಶಯ

## ನಾಡಿನ ಸಮಸ್ತ ಜನತೆಗೆ

# ದೀಪಾವಳಿ ಹಬ್ಬದ

# ಹಾರ್ದಿಕ ಶುಭಾಶಯಗಳು



**ಶ್ರೀ ಶಿವರಾಮ ಹೆಬ್ಬಾರ್**
ಕಾರ್ಮಿಕ ಸಚಿವರು ಹಾಗೂ
ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರಕಾರ